'ಸಂಕ್ರಾಂತಿ ಎಳ್ಳು ಕೊಟ್ಟನ್ನಿ' ಎಂದು ನಮ್ಮ ಮನೆಯಾಕೆ ಅಪ್ಪಣೆ ಕೊಟ್ಟಿದ್ದ ಕಾರಣದಿಂದಾಗಿ, ಕಳೆದ ಜನವರಿ ತಿಂಗಳ ಒಂದು ದಿನ ನನ್ನ ಚಡ್ಡಿ ದೋಸ್ತ್ ಸೀನನ ಮನೆಗೆ ಹೋಗಿದ್ದೆ. ನಮ್ಮ ಗೆಳೆಯರ ಬಳಗದಲ್ಲಿ ಅವನಿಗೆ ಎರಡು ಅನ್ವರ್ಥನಾಮಗಳನ್ನು ದಯಪಾಲಿಸಿದ್ದೆವು. ಸಣ್ಣ ಪುಟ್ಟ ವಿಷಯಗಳಿಗೂ ಅತಿಯಾಗಿ ಯೋಚಿಸುವುದರಿಂದ 'ಆತಂಕವಾದಿ' ಅಂತಲೂ, ಆಕಾಶ ಯಾವಾಗ ತಲೆ ಮೇಲೆ ಬೀಳುತ್ತೋ ಎನ್ನುವ ಚಿಂತೆಯಲ್ಲಿರುತ್ತಿದ್ದ ಕಾರಣ 'ಆಕಾಶರಾವ್' ಅಂತಲೂ ಅವನನ್ನು ಕರೆಯುತ್ತಿದ್ದೆವು. ಆ ಬಗ್ಗೆ ಅವನಿಗೇನೂ ಬೇಸರವಿದ್ದ ಹಾಗೆ ಕಾಣುತ್ತಿರಲಿಲ್ಲ. ಅವನ ನಿಜವಾದ ಹೆಸರಲ್ಲದೇ ಈ ಎರಡು ಹೆಸರುಗಳಿಂದ ಯಾರೇ ಕರೆದರೂ ತಕ್ಷಣ ಓಗೊಡುತ್ತಿದ್ದ!



ಒಂದು ಹೆಜ್ಜೆ ಇಡಬೇಕಾದರೂ ನೂರು ಸಲ ಯೋಚಿಸಿ ಅತಿ ಎಚ್ಚರಿಕೆಯಿಂದ ನಡೆಯುವ ಅವನು ಒಮ್ಮೆ ಅದರಲ್ಲೂ ಎಡವಟ್ಟು ಮಾಡಿಕೊಂಡಿದ್ದ. ನಮ್ಮ ಶಾಲೆಯ ಕಾಂಪೌಂಡಿಗೆ ದೊಡ್ಡದಾದ ಒಂದು ಗೇಟಿತ್ತು. ಅದರ ಒಳಗೇ ಒಂದು ಸಣ್ಣ ಗೇಟೂ ಇತ್ತು. ಬೆಳಗಿನ ಮೊದಲ ಬೆಲ್ ಆದ ಕೂಡಲೇ ಶಾಲೆಯ ದೊಡ್ಡ ಗೇಟನ್ನು ಮುಚ್ಚಿಬಿಡುತ್ತಿದ್ದರು. ತಡವಾಗಿ ಬಂದವರು, ಸಕಾರಣ ಕೊಟ್ಟು, ಸಣ್ಣ ಗೇಟಿನ ಮೂಲಕ ತೂರಿಕೊಂಡು ಒಳಗೆ ಹೋಗಬೇಕಿತ್ತು. ಒಂದು ದಿನ ಶಾಲೆಗೆ ತಡವಾಗಿ ಬಂದಿದ್ದ ಸೀನ, ಅತಿಯಾದ ಮುನ್ನೆಚ್ಚರಿಕೆಯಿಂದ, ಹತ್ತು ಹೆಜ್ಜೆ ಹಿಂದಿನಿಂದಲೇ ತಲೆ ತಗ್ಗಿಸಿಕೊಂಡು ಬಂದಿದ್ದ. ಆದರೆ, ಲೆಕ್ಕಾಚಾರ ತಪ್ಪಿ, ಸರಿಯಾಗಿ ಚಿಕ್ಕ ಗೇಟಿನ ಕೆಳಗೆ ಬಂದಾಗ ತಲೆ ಎತ್ತಿ ಬಿಟ್ಟಿದ್ದ! ಕಬ್ಬಿಣದ ಪಟ್ಟಿ ಅವನ ತಲೆಗೆ ಬಡಿದು ದೊಡ್ಡ ಗಾಯವೇ ಆಗಿಬಿಟ್ಟಿತ್ತು.

ಅಂಥಾ ಅತಿ ಎಚ್ಚರಿಕೆಯ ಮನುಷ್ಯ ಈ ಕೋವಿಡ್ ಸಂಕಷ್ಟದ ಕಾಲದಲ್ಲಿ ಯಾರನ್ನಾದರೂ ಸಲೀಸಾಗಿ ಮನೆಯ ಒಳಗೆ ಬಿಟ್ಟುಕೊಳ್ಳುವುದುಂಟೇ?! ಕೊರೊನಾ ವೈರಸ್ ಭಾರತಕ್ಕೆ ಬಂದಾಗಿನಿಂದ ಅವನ ಮನೆಯ ಕಿಟಕಿ ಬಾಗಿಲುಗಳು ಸದಾ ಕಾಲ ಮುಚ್ಚಿಯೇ ಇರುವುದನ್ನು ಕಾಣಬಹುದಿತ್ತು. ಈಗ ಗೇಟಿಗೂ ಬೀಗ ಹಾಕಿತ್ತು. ಗೇಟಿನ ಹೊರಗೇ ಇದ್ದ ಕಾಲಿಂಗ್ ಬೆಲ್ ಸ್ವಿಚ್ ಒತ್ತಿದೆ. ಕಿಂಡಿಯ ಮೂಲಕ ನೋಡಿದ ಮುಸುಕುಧಾರಿಯಾದ ಸೀನ ಬಂದು ಗೇಟನ್ನು ತೆಗೆದ. ಗೇಟಿನ ಬಳಿಯೇ ಇಟ್ಟಿದ್ದ ಸ್ಯಾನಿಟೈಸರ್ ಕಡೆಗೆ ಕೈ ತೋರಿದ. ಅದರಿಂದ ಕೈ